ದಿನಾಂಕ 28.04.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2ನೇ ಆರೋಪಿತರ ಪರ ಶ್ರೀ. ಎಂ.ಆರ್ ವಕೀಲರಿಂದಃ

ನಮ್ಮದು ಕ್ಷೌರಿಕ ವೃತ್ತಿ ಎಂದರೆ ಹೌದು. ಎಷ್ಟು ಸಂಬಳ ಇದೆ ಎಂದರೆ ಸಾಕ್ಷಿ ಸಂಬಳ ಇಲ್ಲ, ಕಮಿಷನ್ ಮಾತ್ರ. ಎಷ್ಟು ಬರುತ್ತದೆ ಎಂದರೆ ತಿಂಗಳಿಗೆ 25 ರಿಂದ 30 ಸಾವಿರ ಬರುತ್ತದೆ ಎಂದು ಹೇಳುತ್ತಾರೆ. ಅಷ್ಟು ಆಧಾಯ ಇದೆ ಎಂದು ಪಾಸ್ ಬುಕ್ ನಲ್ಲಿ ಕಾಣುತ್ತದೆ ಎಂದರೆ ಸರಿ. ನನ್ನ ಖಾತೆ ಧರ್ಮಸ್ಥಳ ಪೋಸ್ಟ್ ಆಫೀಸ್ ನಲ್ಲಿ ಇರುತ್ತದೆ. ಅಲ್ಲದೆ ಎಸ್.ಬಿ.ಐ, ಉಜಿರೆ ಬ್ಯಾಂಕಿನಲ್ಲೂ ಸಹ ನನ್ನ ಖಾತೆ ಇರುತ್ತದೆ. ಆರೋಪಿತರು ನಮಗೆ ಸಂಬಂಧಿಕರು ಎಂದರೆ ಹೌದು. ನಮ್ಮ ಆರ್ಥಿಕ ಪರಿಸ್ಥಿತಿ ಗೊತ್ತಿದ್ದವರು ಎಂದರೆ ಸರಿ. ಚಾಸಾ1 ರವರನ್ನು ಬಹಳ ಕಷ್ಟದಿಂದ ಮದುವೆ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ಮದುವೆಗಾಗಿ ಮನೆಯನ್ನು ಸಹ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಚಾಸಾ1 ರವರಿಗೆ ಎಜುಕೇಶನ್ ಲೋನ್ ಸಹ ಇತ್ತು ಎಂದರೆ ಸರಿ. ಮದುವೆ ಮಾಡಿಕೊಡುವಾಗ ಆರೋಪಿ ಮನೆಯವರು ವಿದ್ಯಾವಂತೆ ಆಗಿದ್ದರೆ ಸಾಕು ಮದುವೆ ಮಾಡಿಕೊಂಡಿದ್ದಾರೆ ಎಂದರೆ ಹೌದು. ಆರ್ಥಿಕ ವಿಚಾರದಲ್ಲಿ ಮದುವೆ ಸಮಯದಲ್ಲಿ ಯಾವುದೇ ಬೇಡಿಕೆ ಇರಲಿಲ್ಲ. ಮದುವೆಗೆ ಎರಡು ಕುಟುಂಬದವರು ಸರಿಸಮಾನವಾಗಿ ಖರ್ಚು ಮಾಡಿದ್ದೇವೆ ಎಂದರೆ ಸರಿ. ಯಾವುದೇ ಉಡುಗೊರೆಗಳು ಇರಲಿಲ್ಲ, ಬರಿ ಆಶೀರ್ವಾದ ಮಾತ್ರ ಇತ್ತು. ಚಾಸಾ1 ರವರಿಗೆ ಹಲ್ಲೆ ಮಾಡಿದ ವಿಚಾರ, ವರದಕ್ಷಿಣೆ ಕಿರುಕಳು ಕೊಟ್ಟ ವಿಚಾರ, 1ನೇ ಆರೋಪಿಗೆ ಬೇರೆಯವರೊಂದಿಗೆ ಅಕ್ರಮ ಸಂಬಂಧ ಇರುವ ವಿಚಾರ ಚಾಸಾ1 ರವರು ನನಗೆ ಹೇಳಿ ಮಾತ್ರ ಗೊತ್ತು. ನನ್ನ ಮುಂದೆ ಯಾವುದೇ ವರದಕ್ಷಿಣೆ ಬೇಡಿಕೆ ಇಟ್ಟಿರುವುದಿಲ್ಲ. ಪ್ರಕರಣ ದಾಖಲಾದ ನಂತರ ನಾನು ಬಾಂಬೆಗೆ ಹೋಗಿರುವುದಿಲ್ಲ. ದೂರು ನೀಡಲು ಹೋದಾಗ ವಕೀಲರನ್ನು ಭೇಟಿ ಮಾಡಿ ನಂತರ ಹೋಗಿ ದೂರು ನೀಡಿದ್ದೀರಾ ಎಂದರೆ ಇಲ್ಲ, ಮೊದಲು ಪೊಲೀಸ್ ಠಾಣೆಗೆ ಹೋಗಿ ನಂತರ ವಕೀಲರಿಗೆ ಭೇಟಿ ಮಾಡಿದ್ದೇವೆ ಎಂದು ಹೇಳುತ್ತಾರೆ. ವಕೀಲರು ಏನು ಬರೆಯಬೇಕು ಎಂದು ಹೇಳಿದ್ದರು ಆ ರೀತಿ ನೀಡಿದ್ದೇವೆ ಎಂದರೆ ಸರಿ.

2. ವರದಕ್ಷಿಣೆ ಮತ್ತು ಹಲ್ಲೆಯಾದ ವಿಚಾರ 1ನೇ ಆರೋಪಿಗೆ ಅನೈತಿಕ ಸಂಬಂಧ ಇದೆ ಎಂಬ ವಿಚಾರದ ಮೇಲೆ ಬಂದಿದೆಯಾ ಎಂದರೆ ಸಾಕ್ಷಿ ಚಾಸಾ1 ರವರು ಮುಂಬೈಯಿಂದ ಮನೆಗೆ ಬಂದು ನನ್ನ ತಾಯಿಯ ಹತ್ತಿರ ಈ ರೀತಿ ಹಿಂಸೆ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದರು ಎಂದು ಹೇಳುತ್ತಾರೆ. ಅನೈತಿಕ ಸಂಬಂಧದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಚಾಸಾ1 ರವರ ಹತ್ತಿರ screenshot ಇದೆ ಎಂದು ಹೇಳುತ್ತಾರೆ. ಅದನ್ನು ಪೊಲೀಸರಿಗೆ ಕೊಟ್ಟಿದ್ದೀರಾ ಎಂದರೆ ಹೌದು. ನಾನು ಚಾಸಾ1 ರವರ ಸಹೋದರನಾದ ಕಾರಣ ಚಾಸಾ1 ರವರ ಕಟ್ಟುಕತೆಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ1 ರವರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಲಂಡನ್ ಗೆ ಹೋಗುವ ಆಸೆ ಇಟ್ಟಿದ್ದರು ಎಂದರೆ ಸಾಕ್ಷಿ ಮದುವೆಗೆ ಮುಂಚೆ ಹೋಗುವ ಮನಸ್ಸು ಇತ್ತು, ಅವಕಾಶವು ಬಂದಿತ್ತು ಎಂದು ಹೇಳುತ್ತಾರೆ. ಆ ಸಮಯದಲ್ಲಿ ಚಾಸಾ1 ರವರು 1ನೇ ಆರೋಪಿಯ ಹತ್ತಿರ ವಿದೇಶಕ್ಕೆ ಹೋಗಲು ಸಹಾಯ ಮಾಡಬೇಕು ಎಂದು ಕೇಳಿದ್ದರು ಎಂದರೆ ಸಾಕ್ಷಿ ಎಂಗೇಜ್ ಮೆಂಟ್ ಆಗುವ ಪೂರ್ವದಲ್ಲಿ ಅವಕಾಶ ಬಂದಿತ್ತು, ಆಗ ಪಾಸ್‌ಪೋರ್ಟನ್ನು ಮಾಡಿದ್ದೆವು ಎಂದು ಹೇಳುತ್ತಾರೆ. ಮದುವೆಯಾದ ನಂತರ ಅದರ ಪೇಪರ್ ಗಳನ್ನು 1ನೇ ಆರೋಪಿಯ ಸಹಾಯದಿಂದ ಮುಂದುವರೆಸಿದ್ದಾರೆ ಎಂದರೆ ಸಾಕ್ಷಿ ಎಂಗೇಜ್ ಮೆಂಟ್ ಆದ ನಂತರ ಅದಕ್ಕೆ ಅಷ್ಟು ಮಹತ್ವ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಮದುವೆ ಸಮಯದಲ್ಲಿ ಅದಕ್ಕೂ ಪೂರ್ವದಲ್ಲಿ ಚಾಸಾ1 ರವರು ಕೆಲಸದಲ್ಲಿ ಇದ್ದರಾ ಎಂದರೆ ಇಲ್ಲ.

3. ಮದುವೆಯಾಗಿ ಹೋದವರು ಏಪ್ರಿಲ್ 3ನೇ ತಾರೀಖಿನಂದು ವಾಪಾಸು ಬಂದಿದ್ದು ಅದರ ಮಧ್ಯದಲ್ಲಿ ನಮ್ಮ ಮನೆಗೆ ವಾಪಾಸು ಬಂದಿರುವುದಿಲ್ಲ. 1ನೇ ಆರೋಪಿ ಚಾಸಾ1 ರವರ ಖರ್ಚಿಗೆ ಹಣ ಕೊಡುತ್ತಿದ್ದ ವಿಚಾರ ಗೊತ್ತಾ ಎಂದರೆ ಸಾಕ್ಷಿ ಮದುವೆ ಸಮಯದಲ್ಲಿ ಗಿಫ್ಟ್ ಮತ್ತು ಹಣ ಇತ್ತು ನಂತರ ಒಂದು ತಿಂಗಳು ಆದ ಮೇಲೆ ಪುನಃ ಬಂದಿದ್ದರು ಆಗ ನಾವು ಹಣ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನನ್ನ ಪ್ರಕಾರ 1ನೇ ಆರೋಪಿಗೆ ಎರಡು ಮನೆ, ವ್ಯವಹಾರ ಮತ್ತು ಕೋಟಿಗಟ್ಟಲೆ ಹಣ ಇದೆ ಎಂದರೆ ಸಾಕ್ಷಿ ಹಾಗೆ ಇದೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. 1 ಮತ್ತು 2ನೇ ಆರೋಪಿತರು ಚಾಸಾ1 ರವರಿಗೆ ಯಾವತ್ತೂ ಹಲ್ಲೆ ಮಾಡಿಲ್ಲ ಮತ್ತು ಬೈದಿಲ್ಲ ಎಂದರೆ ಸಾಕ್ಷಿ ಹೊಡೆದಿರುವುದನ್ನು ಚಾಸಾ1 ರವರು ಬಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ಯಾವತ್ತಲು ಸಹ ಆರೋಪಿತರು ನನ್ನಲ್ಲಾಗಲಿ ಅಥವಾ ಬೇರೆಯವರ ಹತ್ತಿರ ವರದಕ್ಷಿಣೆಯನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಅನೈತಿಕ ಸಂಬಂಧ ಇದೆ ಎಂದು ಕಟ್ಟುಕತೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು, ಚಾಸಾ1 ರವರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೊರದೇಶಕ್ಕೆ ಹೋಗುವ ಇಚ್ಛೆಯನ್ನು

ಈಡೇರಿಸಿಲಿಲ್ಲ ಹಾಗೂ ಕ್ಷುಲ್ಲಕ ವಿಚಾರದಿಂದ ಚಾಸಾ1 ರವರೇ ಮದುವೆಯನ್ನು ಮುರಿದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ1 ರವರು ಮಂಗಳೂರಿಗೆ ಬರುವಾಗ ಒಡವೆಗಳನ್ನು ಧರಿಸಿಕೊಂಡು ಬಂದಿದ್ದರು ಎಂದರೆ ಇಲ್ಲ. ಒಡವೆಗಳನ್ನು ತಂದಿದ್ದರೂ ಸಹ ತಂದಿಲ್ಲ ಎಂದು ಸುಳ್ಳು ಕತೆ ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ1 ರವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು

(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ